## ಕಲ್ಪಿಸಲಸಾಧ್ಯ...

ಗುಂಡ ಸಂದರ್ಶನಕ್ಕೆ ಹೋಗಿದ್ದ. ಸಂದರ್ಶಕರು ಮೊದಲ ಪ್ರಶ್ನೆ ಕೇಳಿದರು: 'ನೀವು ಬಹುಮಹಡಿ ಕಟ್ಟಡದ 16ನೇ ಅಂತಸ್ತಿನಲ್ಲಿ ಇದ್ದೀರಿ ಎಂದು ಕಲ್ಪಿಸಿಕೊಳ್ಳಿ. ಆಗ ಇದ್ದಕ್ಕಿದ್ದಂತೆ ಆ ಮಹಡಿಯಲ್ಲಿ ಬೆಂಕಿ ಕಾಣಿಸಿಕೊಳ್ಳುತ್ತದೆ. ನೀವು ಏನು ಮಾಡುತ್ತೀರಿ?'
'ನಾನು ಏನೂ ಮಾಡುವುದಿಲ್ಲ ಸರ್. ನಾನು 16ನೇ ಮಹಡಿಯಲ್ಲಿದ್ದಂತೆ, ಆಗ ಅಲ್ಲಿ ಬೆಂಕಿ ಕಾಣಿಸಿಕೊಂಡಂತೆ ನಾನು ಕಲ್ಪಿಸಿಕೊಳ್ಳುವುದಕ್ಕೂ ಹೋಗುವುದಿಲ್ಲ' ಎಂದ ಗುಂಡ.

**ಶಂಕರೇಗೌಡ ತುಂಬಕೆರೆ**





## ಗೂಬೆ

ಯಾವುದೊ ಕೆಲಸದ ಮೇಲೆ ಹೊರಗೆ ಹೋಗಿದ್ದ ಪರಮೇಶಿ, ಅಲ್ಲಿಂದ ಮರಳಿ ಬರುವಾಗ ಗೂಬೆಯೊಂದನ್ನು ತಂದು ಸಾಕತೊಡಗಿದ್ದ. ಗೂಬೆಯನ್ನು ಮನೆಯಲ್ಲಿ ಸಾಕಬಾರದು ಎಂದು ಅನೇಕರು ಹೇಳಿದರೂ ಕೇಳಲಿಲ್ಲ. ಒಮ್ಮೆ ಪರಮೇಶಿಯ ಮನೆಗೆ ಬಂದ ಸೋದರಮಾವ, 'ಅಯ್ಯಯ್ಯೊ ಇದೇನೊ ಪರಮೇಶಿ, ಗೂಬೆಯನ್ನು ಮನೇಲಿ ಇಟ್ಕೊಂಡಿದ್ದೀಯ?' ಎಂದ.
'ಯಾಕೆ ಮಾವ, ಗೂಬೆನ ಯಾಕೆ ಸಾಕಬಾರದು?' ಪ್ರಶ್ನಿಸಿದ ಪರಮೇಶಿ.
'ಒಂದೇ ಮನೆಯಲ್ಲಿ ಎರಡು ಗೂಬೆ ಇರಬಾರದು ಕಣೊ' ಎಂದ ಮಾವ.

**ಎಂ.ಕೆ. ಮಂಜುನಾಥ್**